ವಿಷಯ : ಕಾಪು ಮತಕ್ಷೇತ್ರ ಫಲಿಮಾರು ಅಣೆಕಟ್ಟು ದುರಸ್ತಿ

1508 (2021)-ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕಾಪು ಮತಕ್ಷೇತ್ರದ ಫಲಿಮಾರು ಅಣೆಕಟ್ಟು ದುರಸ್ತಿ ಕಾರ್ಯವು ಯಾವ ಹಂತದಲ್ಲಿದೆ?

ಆ) ದುರಸ್ತಿ ಕಾಮಗಾರಿಗೆ ಸರ್ಕಾರದವರು ನಿಗದಿಗೊಳಿಸಿರುವ ಮೊತ್ತವೆಷ್ಟು?

ಇ) ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು)

ಅ) 1996-97ನೇ ಸಾಲಿನಲ್ಲಿ ಹೊಸ ಹಲಿಗೆಗಳನ್ನು ಒದಗಿಸಲಾಗಿರುತ್ತದೆ.

ಆ) ಈ ಕಾಮಗಾರಿಯ ದುರಸ್ತಿಗಾಗಿ ಸುಮಾರು 20.00 ಲಕ್ಷ ರೂ.ಗಳು ವೆಚ್ಚವಾಗಬಹುದೆಂದು ಅಂದಾಜಿಸಲಾಗಿದೆ.

ಅನುದಾನದ ಲಭ್ಯತೆಯ ಮೇಲೆ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ವಿಷಯ : ಖಾಸಗೀ ಕ್ಷೇತ್ರದಲ್ಲಿ ವಿದ್ಯುತ್ ಉತ್ಪಾದನೆ.

1509 (2088)-ಶ್ರೀ ಬಿ. ಎಸ್. ಯುಡಿಯೂರಪ್ಪ (ಶಿಕಾರಿಪುರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1) ಕಳೆದ 3 ವರ್ಷಗಳಲ್ಲಿ ರಾಜ್ಯದ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು ಯಾವ ಯಾವ ಯೋಜನೆಗಳನ್ನು ಆರಂಭಿಸಲಾಯ್ತು ಎಂದು ಸಂಪೂರ್ಣಗೊಳಿಸಲಾಯ್ತು? ಎಷ್ಟು ವೆಚ್ಚದಲ್ಲಿ ಎಷ್ಟು ಪ್ರಮಾಣ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ? (ಪ್ರತ್ಯೇಕವಾಗಿ ವಿವರ ನೀಡುವುದು)

2) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ವಿದ್ಯುತ್ ಕ್ಷೇತ್ರಕ್ಕೆ ಪ್ರತಿ ವರ್ಷ ವಿನಿಯೋಗಿಸಿದ ಯೋಜನೆ, ಯೋಜನೇತರ ವಿಶ್ವಬ್ಯಾಂಕ್ ಅಥವಾ ಇತರೆ ಮೂಲ ಹಣ ಎಷ್ಟು?

3) ಕಳೆದ ಮೂರು ವರ್ಷಗಳಲ್ಲಿ ಖಾಸಗೀ ಕ್ಷೇತ್ರದಲ್ಲಿ ವಿದ್ಯುತ್ ಉತ್ಪಾದನೆ ಮಾಡು ಕ್ರಮ ಕೈಗೊಳ್ಳಲಾಗಿದೆಯೇ?